COMBAT
Maleria
with—
Cinchogul Co:& Tablets
VISIT—
" P L O Y "
Stall 28 Block 'D'
DASARA EXHIBITION

Reg No.M 1299) Daily & Weekly (Founded 1917

ಸತ್ಯವಾದಿ
SATYAVADI

ಸಂಪುಟ 27 ಸಂಚಿಕೆ 24] ಸೋಮವಾರ 14—10—43 [ಪೃ 6

ರಣಜಿತ್ .... ಬಿಡಿವಾರ
" ಬಿ ವಾ ಡಿ "
ಜೊತೆ ... ಕೂಡ
ಲಾಜೆ ... ಕೂಡ
ಅಹಸುದಾಬಾರುಗಳ್ಲಿ ಸಿ ... ಗಳೂ
ಬೆಂಗಳೂರಿನಲ್ಲಿ 14 ವಾ ... ಳೂ
ನಜೆಯ ಮುಖೋನ್ನತ ... ಕ್ಚಿತ್ರ
ಪ್ರತಿ ದಿನ 3 ಆಟ

ರಷನರ ಸಾಹಸ

ಬಿಕ್ಷುಕರ ಕ್ಲಬ್

ಲಾಹೋರು ಟ್ರಿಬ್ಯೂನ್ ಪತ್ರಿಕೆಯ ಶ್ರೀ ಅಮರಚಂದ್ ಭಾಟಿಯವರು ಬಿಕ್ಷುಕರ ವಿಷಯವನ್ನು ತಿಳಿಯಲು ಉತ್ತರ ದೇಶದ ನಾನಾ ಭಾಗಗಳಲ್ಲಿ ಸಂಚರಿಸಿದರು. ಇವರು ಹೇಳುವುದೇನೆಂದರೆ ಭಿಕ್ಷುಕರು ಅನೇಕ ಕಡೆ ಕ್ಲಬ್‌ಗಳನ್ನು ಮಾಡಿಕೊಂಡಿರುವರು. ಉದಾಹರಣೆಗೆ ಲಾಹೋರು ಅಮೃತಸರ ತೆಗೆದುಕೊಳ್ಳಿ. ಇಲ್ಲಿ ಭಿಕ್ಷುಕರು ಊರಲ್ಲೆಲ್ಲಾ ಸುತ್ತಬೇಕು. ಇವರಿಗೆ ಗೊತ್ತಾದ ಸ್ಥಳಗಳಲ್ಲಿ ಭಿಕ್ಷ ಬೇಡಬೇಕು. ದೇವಸ್ಥಾನ ಸ್ಥಳಗಳಲ್ಲಿಯೂ ಜಾಗಿಲುಗಳಲ್ಲಿಯೂ ಬೇಡಬೇಕು. ತಾವು ತಂದ ಭಿಕ್ಷವನ್ನು ಎಲ್ಲರೂ ಸಮಾನಾಗಿ ಹಂಚಿಕೊಳ್ಳಬೇಕು. ಅವರಲ್ಲಿ ಮುಖಂಡನಾದ ಚೌಧ್ರಿಗೆ ಸೇಕಡ 10 ರಂತೆ ಕಮಿಷನ್ ಕೊಡಬೇಕು ಇವರಲ್ಲಿ ಒಂದು ಪಂಚಾಯಿತಿ ಇದೆ. ಇದಕ್ಕೆ 5 ಮಂದಿ ಸದಸ್ಯರಿರುವರು, ಇವರು ಹಂಚಿಕೆಯನ್ನು ಸರಿಯಾಗಿ ಹಂಚಲು ನೋಡಿಕೊಳ್ಳುವರು. ಈ ಕ್ಲಬ್ಬಿನ ಗುಮಾಸ್ತೆ ಒಬ್ಬ ಬನಿಯ. ಇವನು ಲೆಕ್ಕಪತ್ರ ನಡೆಸುವವನು. ಇವನಿಗೆ ಶೇಕಡ 2 ರಂತೆ ಕಮಿಷನ್. ಮೈಸೂರಿನಲ್ಲಿ ಒಬ್ಬ ಸರ್ಕಾರಿ ನೌಕರನ ಸಂಬಳ ತಿಂಗಳಿಗೆ 20 ರೂಪಾಯಿ ಮೇಲೆ. ಇತರ ಕಡೆ ಸಂಗೀತಪಾಠ ಹೇಳುವದರಿಂದ 50–60 ರೂ. ಸಂಪಾದನೆ. ಇದರ ಮೇಲೆ ಭಿಕ್ಷುಕ ವೃತ್ತಿ. ಇವರು ಕಾಫಿ ಟೀ ಕುಡಿಯುವದಿಲ್ಲ. ಮನೆಯವರು ಕುಡಿಯುವದು ಓವಲ್ಟೈನ್. ಬಟ್ಟೆ ಪರದೇಶಿ ಸ್ಟೈಲ್ ಬಟ್ಟೆ.

ಭಾರತೀಯ ಸೈನ್ಯಗಳು ಇದರಲ್ಲೂ ಸಂಸ್ಥಾನದ ಸೇನೆಗಳು ಇಟಲಿಯ ರಣರಂಗದ ಹೋರಾಟದಲ್ಲಿವೆ

ವಿವಿಧ ವಿಷಯ

ನೇಪಲ್ಸ್ ನಗರವನ್ನು ಮಿತ್ರರು ಗೆದ್ದು ವಶಪಡಿಸಿಕೊಂಡರಷ್ಟೆ. ಅಲ್ಲಿರುವ ಬೀದಿಗಳಿಗೆ ಇಟಲಿಯವರ ವಿಚಿತ್ರ ಹೆಸರುಗಳನ್ನಿಡುತ್ತಿದ್ದಾರೆ.

ಂ ಂ

ರಷ್ಯಾದಲ್ಲಿ ರಷ್ಯನರೂ ಜರ್ಮನರೂ 3 ಕಡೆಗಳಲ್ಲಿ ಭಯಂಕರವಾಗಿ ಯುದ್ಧ ಮಾಡುತ್ತಿರುವರು. ಗೋಮಲ್‌ಗೆ 5 ಮೈಲಿಯಲ್ಲಿ ರಷ್ಯನರು ಬಂದಳಿದಿದ್ದಾರೆ.

ಂ ಂ

ಹಿಟ್ಲರ್ ಈಗ ಹೊಸ ತರಹದ ಭಯಂಕರವಾದ ಟಾರ್ಪೆಡೋ ಉಪಯೋಗಿಸುತ್ತಿರುವನಷ್ಟೆ. ಈಗ ಸಬ್‌ಮೆರೀನುಗಳಲ್ಲಿ ವಿಮಾನಗಳನ್ನು ತೆಗೆದುಕೊಂಡು ಹೋಗುವಂತೆ ಸಬ್ ಮೆರೀನುಗಳನ್ನು ತಯಾರಿಸುವನಂತೆ.

ಂ ಂ

ತನ್ನ 6 ವರ್ಷದ ಮಗುವನ್ನು ಸಾಕಲಾರದೆ ಗರ್ಜಾಮಿನ ಒಬ್ಬ ಹೆಂಗಸು ತನ್ನ ಮಗುವನ್ನು ಒಂದು ಅಣೆಗೆ ಮಾರಿದಳು. ಕೊಂಡುಕೊಂಡ ಧರ್ಮಾತ್ಮನು ಮಗುವನ್ನು ಒಂದು ಆಶ್ರಮಕ್ಕೆ ಕಳುಹಿಸಿದನು.

ಂ ಂ

ಬೆಲ್ಜಿಯಮ್‌ನಲ್ಲಿ 20 ರಾಜಕೀಯ ಖೈದಿಗಳು 'ತಾವು ಇತರ ಖೈದಿಗಳಂತೆ ಉಡುಪನ್ನು ಧರಿಸುವುದಿಲ್ಲವೆಂದು ಯಾವ ಬಟ್ಟೆಯನ್ನೂ ಹಾಕಿಕೊಳ್ಳದೆ ಒರೆಮೈಯಲ್ಲೇ ಇರುತ್ತಾರೆ.

ಂ ಂ

ಹೆಚ್ಚು ಆಹಾರ ಬೆಳೆಯಲು ರೈತರಿಗೆ ಗುಳ ಮುಂತಾದ ವ್ಯಸನಕಾರಿಯಾದ ಮಟ್ಟುಗಳನ್ನು ತಯಾರ್ಮಾಡಲು 30ಸಾವಿರ ಟನ್ ಕಬ್ಬಿಣ ಉಕ್ಕು ಕಳಿಸಬೇಕೆಂದು ಕೇಂದ್ರ ಸರಕಾರವನ್ನು ಮದರಾಸು ಸರ್ಕಾರದವರನ್ನು ಕೇಳಿರುತ್ತಾರೆ.

ಕಾಗದದ ಅಭಾವ

ಕಾಗದದ ಅಭಾವದಿಂದ ಮದರಾಸು ವಿಶ್ವವಿದ್ಯಾನಿಲಯದವರು ಮುಂಬೆ ನಡೆಯುವ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಬಗ್ಗೆ ಈ ರೀತಿ ಆಜ್ಞೆ ಮಾಡಿದ್ದಾರೆ— ವಿದ್ಯಾರ್ಥಿಗಳು ಉತ್ತರಗಳನ್ನು ಹೆಚ್ಚು ಮಾತಿಲ್ಲದೆ ಬರೆಯಬೇಕು. ಒಂದು ಪುಟದಲ್ಲಿ 20 ಪಂಕ್ತಿಗೆ ಕಮ್ಮಿಯಿಲ್ಲದೆ ಬರೆಯಬೇಕು. ಕಾಗದದ ಎಡಬದಿ ಕಡೆಯಲ್ಲಿಯೂ ಬರೆಯಬೇಕು. ಉತ್ತರ ಬರೆಯಲು ಹೆಚ್ಚಿಗೆ ಕಾಗದ ಕೊಡುವುದಿಲ್ಲ. ಈ ಸಲಹೆ ನಡೆಸದಿರುವವರ ಪಟ್ಟಿಯನ್ನು ಪರೀಕ್ಷಕರು ಮೇಲಿನ ಅಧಿಕಾರಿಗಳ ಗಮನಕ್ಕೆ ತರಬೇಕೆಂದು.

ಸೂಚನೆ

ಬೆಟ್ಟದ ಚಾತ್ರೆಗಾಗಿ ಪ್ರೆಸ್ 'ಕೆಲಸಗಾರರಿಗೆ ರಜಾ ಕೊಟ್ಟಿರುವದರಿಂದ ನಾಳೆನಾಡಿದ್ದು ಪತ್ರಿಕೆ ಪ್ರಕಟಿಸಲ್ಪಡುವುದಿಲ್ಲ.

ದೀಪಾವಳಿ ವಿಶೇಷ ಸಂಚಿಕೆ ಹೊರಡಿಸಲು ಏರ್ಪಡಿಸುತ್ತಿದ್ದೇವೆ.

ಇಟಲಿಯಲ್ಲಿ ಮಳೆ ಒಂದೇ ಸಮನಾಗಿ ಹುಯ್ದು ನದಿಗಳೆಲ್ಲಾ ಪೂರ್ಣ ಪ್ರವಾಹದಿಂದ ತುಂಬಿವೆ.

ಂ ಂ

ಕಾರ್ಸಿಕವನ್ನು ಫ್ರೆಂಚ್ ನ್ಯಾಷನಲ್ ಸೈನ್ಯ ಪೂರ್ಣ ಜಯಸಿದ್ದಕ್ಕಾಗಿ ಫ್ರೆಂಚ್ ಜನಾಂಗಗಳು ಉತ್ಸವವನ್ನು ಮಾಡಿದ್ದಾರೆ.

ಪ್ರಕಟಣೆ

ಈ ಸಲದ 'ವಿಶ್ವಭಾರತಿ'ಯ ಬೆಲೆಯನ್ನು **ಎರಡೂವರಣೆ**
ಎಂದು ನಿರ್ಧರಿಸಿ ಈ ಮೂಲಕ ಸಾರ್ವಜನಿಕರಿಗೆ
ತಿಳಿಸಲು ಬಯಸುತ್ತೇವೆ.

ಅಕ್ಟೋಬರ್ 43] ಸಂಪಾದಕ, " ವಿಶ್ವಭಾರತಿ " ಮೈಸೂರು

ವರ್ತಮಾನ ಸಂಗ್ರಹ

—

ಮಲಯಾದಿಂಡ ಳ ಮುಂದಿ ಜಪಾನೀಯರ ಹಣದಿಂದ ಭಾರತಕ್ಕೆ ಬಂದು ಅಪಪ್ರಚಾರ ಮಾಡುತ್ತಿದ್ದವರನ್ನು ಗಲ್ಲಿಗೇರಿಸಲಾಯಿತು. ಇವರ ಬಳಿಯಲ್ಲಿ ಜಪಾನೀ ನಾಣ್ಯಗಳಿದ್ದವು.

ಕಾರ್ಸಿಕವನ್ನು ಫ್ರೆಂಚ್ ನ್ಯಾಷನಲಿಸ್ಟರು ಪೂರ್ಣ ಜಯಿಸಿದ್ದಕ್ಕಾಗಿ ಫ್ರೆಂಚ್ ಜನಾಂಗಗಳು ಉತ್ಸವವನ್ನು ಮಾಡುತ್ತಿರುವವು.

ಬಂಗಾಳಾ ಕ್ಷಾಮಕ್ಕೆ ಕೆನಿಯಾದಿಂದ ಸಹಾಯ ಕಳುಹಿಸಲಾಗಿದೆ.

ಬ್ರಿಟಿಷ್ ಸೇನೆಗಳು ಇಟಲಿಯ ಮೇಲಿ ಧ್ಯ ಪ್ರದೇಶದಲ್ಲಿ ನುಗ್ಗಿವೆ.

ಇಟಲಿಯಲ್ಲಿ ಮಳೆ ಒಂದೇ ಸಮನಾಗಿ ಹುಯ್ದು ನದಿಗಳೆಲ್ಲ ಪೂರ್ಣ ಪ್ರವಾಹವಿಂದ ತುಂಬಿವೆ.

ಬೊಂಭಾಯಿನಲ್ಲಿ ಬ್ಲಾಕ್‌ಔಟ್9 ಪೂರ್ತಿಯಾಗಿ ಸಧ್ಯದಲ್ಲೇ ಏಜಾಲಾಗುತ್ತೆ.

ಮೈಸೂರಿನಲ್ಲಿ ಕಾಕ್ಕಾರರ ಮೇಲಿದ್ದ ನಿರ್ಬಂಧವನ್ನು ಸರ್ಕಾರದವರು ತೆಗೆದು ಹಾಕಿರುತ್ತಾರೆ.

ಬೊಂಬಾಯಿನಲ್ಲಿ ಹೋದ ವರ್ಷ ರೇಡಿಯೋ ಸೆಟ್ಟುಗಳನ್ನಿಟ್ಟುಕೊಂಡು ಲೈಸೆನ್ಸ್ ತೆಗೆದುಕೊಳ್ಳದವರು 200 ಕ್ಕೆ ವಿಚಾರಿಸುವರಂತೆ.

ಒರುವ ಗುರುವಾರ ಪೈಸರಾಯರು ದೆಹಲಿಯಲ್ಲಿ ದೇಶೀಯ ರಾಜರುಗಳಿಗೆ ತಮ್ಮ ಕಡೇ ಭಾಷಣವನ್ನು ಮಾಡುವರಾಗಿರುವರು.

ರೊವೇನಿಯಾದಲ್ಲಿರುವ 17 ವರ್ಷದ ಯಹೂದ್ಯರು ಬಲವಂತವಾಗಿ ಕೆಲಸ ಮಾಡಬೇಕೆಂದು ಸರ್ಕಾರಿ ಆಜ್ಞೆಯಾಗಿರುವುದಂತೆ.

ಜಿಬ್ರಾಲ್ಟರಿನಲ್ಲಿ ಒಬ್ಬ ಸ್ಪೈ ನಿವಾಸಿಯು ಹಡಗು ಕಟ್ಟುವ ಸ್ಥಳವನ್ನು ನಾಶಮಾಡುತ್ತಿದ್ದನೆಂದು ಅವನನ್ನು ಗಲ್ಲಿಗೇರಿಸಿದರು.

ವಾಯುವ್ಯ ಗಡಿನಾಡಿನಲ್ಲಿ ಯಾರು 500 ಚೀಲಗಳಿಗಿಂತ ಹೆಚ್ಚಾಗಿ ಆಹಾರ ಪದಾರ್ಥಗಳನ್ನು ಇಟ್ಟುಕೊಳ್ಳಬಾರದೆಂದು ಸರ್ಕಾರ ಆಜ್ಞೆ.

ಪ್ರಜಾಪ್ರತಿನಿಧಿ ಸಭೆ

6 ನೇ ದಿವಸ

—

ಶ್ರೀ ಪತ್ರಿ ಬಸಪ್ಪನವರ ಪ್ರಶ್ನೆಗೆ ಸರಕಾರದವರು, ಮೊಳಕಾಲ್ಮೂರು ತಾಲ್ಲೂಕು ದೇವಸಮುದ್ರಹೋಬಳಿ ಹೊಸಹಳ್ಳಿಗ್ರಾಮದ ಕೆರೆಯು ಒಡೆದು 30 ವರ್ಷವಾಯಿತು, ಇದರ ಆಚ್ಚುಕಟ್ಟು 14 ಎಕರೆ 30 ಗುಂಟೆ, ಇದನ್ನು ದುರಸ್ತು ಪಡಿಸಲು ಹೆಚ್ಚು ವೆಚ್ಚವಾಗುತ್ತೆ, ಇದರ ಮೇಲೆ ತರೀ ಕಂದಾಯ ವಜಾಮಾಡಿದೆ ಎಂದು ತಿಳಿಸಿದರು.

ಶ್ರೀ ಕೆ. ರಾಮಣ್ಣನವರು ಪ್ರಶ್ನೆಗೆ ಉತ್ತರ— ಹಾಸನದ ಗೊರೂರು ಬಳಿ ಹೇಮಾವತಿಗೆ ಅಣೆಕಟ್ಟು ಕಟ್ಟಿಸಲು 137.63 ಲಕ್ಷ ರೂ. ಅಂದಾಜಾಗಿದೆ. ಇದರಿಂದ 45 ಸಾವಿರ ಎಕ್ರೆ ತರೀ ಜಮೀನು ಸಾಗುವಳಿಯಾಗಬಹುದು. ಈ ಕೆಲಸವನ್ನು ಪ್ರಾರಂಭಿಸಲು ಯಾವಾಗ ಎನ್ನಲು ಸಾಧ್ಯವಿಲ್ಲ.

ಶ್ರೀ ಪಟೀಲ್ ದ್ಯಾವಪ್ಪಗೌಡರ ಪ್ರಶ್ನೆಗೆ ಉತ್ತರ— ತರೀ ಸಾಗುನಳಿಗೆ ಹಳೇ ನೀಲಾ ರಿಪೇರಿ ಮಾಡಲು ಅರ್ಜಿ ಬಂದಿವೆ. ಜಾಗ್ರತೆಯಾಗಿ ಕೆಲಸ ಮಾಡಿಸಲಾಗುತ್ತೆ.

ಶ್ರೀ ಹೆಚ್. ಸಿ. ಬಸಪ್ಪನವರ ಪ್ರಶ್ನೆಗೆ ಉತ್ತರ— ಹುಲ್ಲಹಳ್ಳಿಯ ಹತ್ತಿರ ಅಣೆಕಟ್ಟುವ ವಿಷಯ ಸಂಕಾರದ ಪರಿಶೀಲನೆಯಲ್ಲಿದೆ.

ಶ್ರೀ ಸಿದ್ದಪ್ಪನವರ ಪ್ರಶ್ನೆಗೆ ಉತ್ತರ— ಕಾಕ್ಕಾಕ್ಕಹಳ್ಳಿ ತಾಲ್ಲೂಕು ಕೋಡಿಹಳ್ಳಿಯ ದೊಡ್ಡಗುಳಿ ಗ್ರಾಮದ ಹತ್ತಿರ ದೊಡ್ಡಗುಳಿ ಪ್ಯಾಜೆಕ್ಟನ್ನು ತಯಾರಿಸಲು ಕಾಲ ಹಿಡಿಯುತ್ತದೆ.

ಟಿ. ಪೂಜಪ್ಪನವರ ಪ್ರಶ್ನೆಗೆ ಉತ್ತರ— ತೋಟಿ. ತಳವಾರ, ನೀರುಗುಂಟ ಇವರು ಗ್ರಾಮದ ಅಧಿಕಾರಿಗಳು.

ಶ್ರೀ ಟಿ. ರುದ್ರಪ್ಪನವರ ಪ್ರಶ್ನೆಗೆ ಉತ್ತರ— ಆಹಾರ ಪದಾರ್ಥಗಳು ಎಲ್ಲಾ ಡಿಸ್ಟ್ರಿಕ್ಟುಗಳಲ್ಲಿಯೂ ಸರಿಯಾಗಿ ಸಿಗುತ್ತೆ. ಎಲ್ಲಾ ಹೋಬಳಿಗಳಲ್ಲಿಯೂ ಮಾಡುವ ಯೋಚನೆ ಇದೆ.

ಕಾಂಗ್ರೆಸ್ಸಿನವರು, ಥಾಸ್ಯಪತೋಟಿ ಸುಪರಾಜು ವಿಚಾರವಾಗಿ ಲಾಛನಸ್ಪಗಳೇನಾಗಿತ್ತಿವೆ ಎಂಬುದನ್ನು ಪರಿಶೀಲಿಸಲು ಬಂದು ಸಮಿತಿ ರಚಿಸಬೇಕೆನ್ನಲು ಜನರಲ್ ಚರ್ಚೆಯಲ್ಲಿ ಚರ್ಚಿಸಿರಿ ಎಂದರು.

ವರ್ತಮಾನ

—

ತಿರುವಾಂಕೂರಿನಲ್ಲಿ ಕೆಲವು ಹೈಸ್ಕೂಲುಗಳಲ್ಲಿ ವೈದ್ಯಕೀಯ ಪಾಠಶಾಲೆಗಳ ಉಪಾಧ್ಯಾಯರಾಗಿರಬೇಕೆಂದು ಸರಕಾರಿ ಆಜ್ಞೆಯಾಗಿದೆ.

ಂ ಂ

ಅಮೇರಿಕಾದ ಕಸಾಸ್ ಪ್ರಾಂತ್ಯದ ಮಾಜಿ ಗೌರ್ನರರು ಮುಂದೆ ತಾವು ಹೇಗೆ ನಡೆಯುವುದು ಎಂಬುದನ್ನು ಈಗಲೇ ವಿವರಿಸಬೇಕೆನ್ನುವರು.

ಂ ಂ

ಬಟ್ಟೆಗಳ ಧಾರಣೆ ಮತ್ತೂ ಶೇಕಡಾ 30 ರಷ್ಟು ಇಳಿಯುವುದೆಂದು ಹೇಳಲಾಗಿದೆ.

ಂ ಂ

ಒಡೋಲಿ ಸರಕಾರವನ್ನು ಸಂಧಿಸಲು ಮಿತ್ರರ ಮಿಲಿಟರಿ ಸಂಸ್ಥೆಯೊಂದು ಇಟಲಿಗೆ ಒರುತ್ತದೆ.

ಂ ಂ

ಭಾರತದ ಆಹಾರದ ಆಭಾವಕ್ಕೆ ಬ್ರಿಟಿಷರು ಜವಾಬ್ದಾರರಲ್ಲವಂತೆ! ಹೀಗೆಂದು ಲಂಡನ್ ಸ್ಪೆಕ್ಟೇಟರ್ ಪತ್ರಿಕೆ ಹೇಳುತ್ತದೆ.

ಂ ಂ

ಜರ್ಮನಿಯರು ಸ್ಮೋಲೆನ್‌ಸ್ಕನ್ನು ಯಾವ ರೀತಿ ನಷ್ಟ ಮಾಡಿದರು ಎಂಬುದನ್ನು ಕಣ್ಣಾರೆ ನೋಡಿದವರೊಬ್ಬರು ಈ ರೀತಿ ವರ್ಣಿಸಿರುವರು.— ಒಂದು ಮನೆಯಲ್ಲಿ 200 ಪೌಂಡಿನ 54 ಟನ್ ಜಾಂಬು ಸಿಕ್ಕಿತು. ಸಾವಿರಾರು ಜನರು ತಮ್ಮ ತಮ್ಮ ಮನೆಗೆ ಒಂದು ನೋಡಲು ಆವರ ಮನೆಯ ಮೋಟು ಗೋಡೆಗಳು ಮಾತ್ರ ನಿಂತಿದ್ದವು, ಒಂದು ಮನೆಯಲ್ಲಿ ಒಂದು ತಲೆ ಬುರುಡೆ ಮಾತ್ರ ಸಿಕ್ಕಿತು. ಯಹೂದ್ಯರಲ್ಲಿ ಒಬ್ಬರೂ ಇಲ್ಲ. ಊರೆಲ್ಲಾ ಸುಡುಗಾಡಾಗಿದೆ. ಅಂಗಡಿಗಳೆಲ್ಲ ಸರಕಾರದವರು 5 ದಿನಗಳು ಮಾತ್ರ ತೆಗೆದಿಟ್ಟಿದ್ದ ಆಹಾರವನ್ನು ಹಾಕುವರು. ನಂತರ ಹೋಟಲ್ ಆಸ್ಪತ್ರೆ ಹಜಾರಾಂದ ಅಂಗಡಿ. ಎಲ್ಲಾ ನೆಂಚಿನಂತೆ ತೆಗೆದಿಟ್ಟು ಪಟ್ಟಣ ನಗರಮುಖವಾಗುತ್ತಿದೆ. ರೀಡಿಯೋ ಕೆಲಸ ಮಾಡುತ್ತಿದೆ. ರಷ್ಯನರು 5 ದಿವಸಗಳಲ್ಲಿ ವಶ ನಗರವನ್ನು ಮುಂಚಿನ ರೀತಿ ತೆಗೆದುಕೊಂಡರು. ಇದಕ್ಕೆ ಪ್ರಜೆಗಳ ಸಹಾಯ ದೊರಕಿತು.

1941 ನೇ ಇಸ್ವಿ ಮೇ 10 ನೇ ತಾರೀಖಿನಿಂದ ಈಚೆಗೆ ನಡೆಯದೇ ಇದ್ದಷ್ಟು ಶತ್ರುಗಳ ಭಾರಿ ಧಾಳಿ ನಡೆಯಿತು. ಪ್ರತಿ ಧಾಳಿ ಸಹಾ ಇತ್ತು. ಅನೇಕ ಸಾವು ನೋವು ಆಯಿತು.

ಂ ಂ

ಆಹಾರ ಹೆಚ್ಚು ಬೆಳೆಯಲು ಸರ್ಕಾರ ಜಮೀನುಗಳನ್ನು ಪಡೆದರೂ ಬೆಳೆಮಾಡಲಿಲ್ಲ, 1942—43 2,00000 ರೂ. ಮಿಗಲಾಯಿತು ಮಳೆ ಬೆಳೆಯಾಗದ ಪ್ರದೇಶಗಳಲ್ಲಿ ಕಂದಾಯ ಕಮ್ಮಿ ಮಾಡಿದೆ. ಶೇಂದಿ ಬಾಬಿನಲ್ಲಿ ಹೆಚ್ಚು ಉತ್ಪತ್ತಿಯಾಯಿತು ಖಾದಿ ಉತ್ಪನ್ನ ಹೆಚ್ಚಿದೆ. ಕಂಬಳಿಗೆ ಗಿರಾಕಿ ಹೆಚ್ಚಿದೆ. ಮೈಸೂರು ರೇಷ್ಮೆಗೆ ಕೀರ್ತಿ ಬಂದಿದೆ. ಪೈಸ್ಕೂಲು ಸಂಖ್ಯೆ ಹೆಚ್ಚಿದೆ. ಸರಕಾರಿ ನೌಕರಿಯಲ್ಲಿ 11884 ಬ್ರಾಹ್ಮಣ, 1,6130 ಬ್ರಾಹ್ಮಣೇತರರು ಇರುತ್ತಾರೆ. ಈಗಿರುವ ರಾಜಕೀಯ ಖೈದಿಗಳು 245 ಅವರಲ್ಲಿ 208 ಬಿಡಲಾಗುವುದು ಶ್ರೀ ಮನ್ಮಹಾರಾಜರವರ ಮೇಲ್ಪಂಕ್ತಿಯನ್ನು ಇತರರೂ ಅನುಸರಿಸಿ ಬಡ ಬಗ್ಗರಿಗೆ ಅನ್ನ ಹಾಕಬೇಕು.



150 ವರುಷದ ಬ್ರಿಟಿಷ ರಾಳಿಕೆ

— —

'ಪ್ರಜಾ ಪ್ರಭುತ್ವಕ್ಕಾಗಿ ಹೋರಾಡುತ್ತಿರುವ ಬ್ರಿಟನವು ಗಾಂಧಿಜೀ, ನೆಹರೂರವರನ್ನು ಬಂಧನದಲ್ಲಿಟ್ಟಿರುವುದು ಬ್ರಿಟನದ ಯುದ್ಧೋದ್ದೇಶದ ಅಪಹಾಸ್ಯವಲ್ಲವೇ? ಹಿಂದೂಸ್ಥಾನಕ್ಕೆ ಅದರ ಮನಸ್ಸಿಗೊಪ್ಪುವಂಥ ರಾಜಕೀಯ ಸ್ಥಾನವನ್ನು ಕೊಟ್ಟರೆ ಸಂಯುಕ್ತ ರಾಷ್ಟ್ರಗಳಿಗೆ ಹಿಂದೂಸ್ಥಾನದಿಂದ ದೊರೆಯುವ ಸಹಾಯ ಸಹಕಾರಗಳು ಬೇರೆ ಯಾವ ರೀತಿಯಿಂದಲೂ ಸಿಗಲಾರವು.' ಹೀಗೆಂದು ಪ್ರೊ. ಲಾಸ್ಕಿಯವರು ತನ್ನ 'ಈಗಿನ ಕ್ರಾಂತಿ' ಎಂಬ ಹೊಸ ಪುಸ್ತಕದಲ್ಲಿ ಬರೆಯುತ್ತಾರೆ. ಯುದ್ಧದ ಮೊದಲು ಹಿಂದೂಸ್ಥಾನದ ಕೂಡ ಒಪ್ಪಂದ ಮಾಡಿಕೊಳ್ಳುವ ಪ್ರಸಂಗವನ್ನು ಬ್ರಿಟಿಷರು ಕಳೆದುಕೊಂಡರು ಮುಂದೆ ಕ್ರಿಪ್ಸರ ಸಂಧಾನದಲ್ಲಿಯೂ ಸರಕಾರದ ಬಿಗುವಿನ ಧೋರಣದಿಂದ ಇಂಥ ಸುವರ್ಣ ಸಂಧಿಯನ್ನು ಉಪಯೋಗಿಸದೆ ಇದ್ದುದು ಇತಿಹಾಸ ದೃಷ್ಟಿಯಿಂದ ದಡ್ಡತನದ್ದಾಗಿರುವುದು. ಕ್ರಿಪ್ಸರಿಗೆ 3 ತರದ ಅಡಚಣೆಗಳಿದ್ದವು—

(1) ಆಗಿನ ಸಮಯವು ಅನುಕೂಲವಾಗಿರಲಿಲ್ಲ

(2) ಕ್ರಿಪ್ಸರಿಗೆ ಕೊಟ್ಟ ಸಲಹೆಗಳು ಒಹಳ ಬಿಗಿಯಾಗಿದ್ದವು. ಅವುಗಳಲ್ಲಿ ಸಂಧಾನ ಯೋಗ್ಯವಾದ ಒದಲಾವಣೆ ಮಾಡುವ ಅಧಿಕಾರವು ಅವರಿಗಿರಲಿಲ್ಲ.

(3) ಅವರ ಸಹಕಾರಿಗಳಲ್ಲಿ ಕೆಲವರಿಗೆ ಕ್ರಿಪ್ಸರಿಗೆ ಯಶಸ್ಸು ಸಿಗಬೇಕೆಂಬ ಇಚ್ಛೆ ಇದ್ದಿಲ್ಲ. ಅದರಿಂದಾಗುವ ಪರಿಣಾಮಕ್ಕೆ ಅವರು ಹೆದರಿದ್ದರು.

ಹಿಂದೂಸ್ಥಾನದ ಸಂಬಂಧದಲ್ಲಿ ಮುಖ್ಯವಾದ ಎರಡು ಅನಿವಾರ್ಯವಾದ ಸಂಗತಿಗಳನ್ನು ಲಾಸ್ಕಿಯವರು ಹೇಳಿದ್ದಾರೆ: ಹಿಂದೀಯರು ಕಳೆದ 150 ವರ್ಷಗಳ ಬ್ರಿಟಿಷರಾಳಿಕೆಯಲ್ಲಿ ರಷ್ಯನರು 25 ವರ್ಷಗಳಲ್ಲಿ ಮಾಡಿದಷ್ಟು ಪ್ರಗತಿಯನ್ನು ಭೌತಿಕ ಮತ್ತು ಭೌದಿಕ ವಿಷಯಗಳಲ್ಲಿ ಮಾಡಿಲ್ಲ. ಎರಡನೇ ಸಂಗತಿಯೆಂದರೆ ಅತಿ ಪಾಶ್ಚಾತ್ಯ ದೇಶದ ಜನರು ಅದರಲ್ಲೂ ಚೀನೀಯರು ಈಗ ಯೂರೋಪು ಅಮೇರಿಕಾಗಳ ಸಂಗಡ ಸಮಾನತೆಯಿಂದ ವರ್ತಿಸುತ್ತಲಿದ್ದಾರೆ. ಆದರೆ ಬ್ರಿಟಿಷ್ ಸರಕಾರವು ಮಾತ್ರ ಈ ವಿಷಯದಲ್ಲಿ ತನ್ನ ಧೋರಣೆಯನ್ನು ಬದಲಾಯಿಸದಿದ್ದದ್ದು ದುರ್ದೈವ.

ಆದ್ದರಿಂದಲೇ ಕ್ರಿಪ್ಸ್ ಸಂಧಾನವು ಮುರಿಯಿತು. ಈಗಿನ ಕಾಲದ ಪರಿಸ್ಥಿತಿಗನುಗುಣವಾದ ರಾಜಕೀಯ ಹಕ್ಕನ್ನು ಕೊಡುವ ಸಾಹಸವು ಬ್ರಿಟಿಷರಿಗಿಲ್ಲ ಹಿಂದುಸ್ಥಾನದಲ್ಲಿ ಅನೇಕ ಜಾತಿ ಪಕ್ಷ ಪಂಗಡಗಳಿರುವವೆಂದು ತಿಳಿದರೂ ಇರಿಥಾ ಅನೈಕ್ಯವನ್ನು ಬೆಳೆಸದೆ ಅದನ್ನು ಎಂಥಾ ಮುತ್ಸದ್ದಿತನವನ್ನು ತೋರಿಸುವುದು ಸಾಧ್ಯವೆದೆ ಜಗತ್ತಿನಲ್ಲಿಯೇ ಈಗ ಕ್ರಾಂತಿ ನಡೆದಿದೆ ಆದ್ದರಿಂದ ಏಷ್ಯಾದಲ್ಲಿಯೂ ಈ ಕ್ರಾಂತಿಯ ಪ್ರಗತಿಯಾಗಿದೆ. ಈಗ ನಡೆದ ಯುದ್ಧವು ಈ ಕ್ರಾಂತಿಯ ಪರಿಣಾಮವಾಗಿದೆ.

ರೋಮ್ ಸಾಮ್ರಾಜ್ಯವು ಹಾಳಾದ ನಂತರ ಇಂಥಾ ದೊಡ್ಡ ಕ್ರಾಂತಿಯಾಗಿಲ್ಲವೆಂದು ಪ್ರೊ. ಲಾಸ್ಕಿಯವರ ಮತವಾಗಿದೆ. ಫ್ರೆಂಚ ಕ್ರಾಂತಿಗೆ 19 ನೇ ಶತಮಾನದಲ್ಲಿದ್ದ ಐತಿಹಾಸಿಕ ಮಹತ್ವವೇ ಈಗ 20ನೇ ಶತಮಾನದಲ್ಲಿ ರಷ್ಯಕ್ರಾಂತಿಗಿರುತ್ತದೆ. ಪ್ರಪಂಚದಲ್ಲಿಯ ಪ್ರಜಾಪ್ರಭುತ್ವ ರಾಷ್ಟ್ರಗಳು ಈಗ ಹೋರಾಡುತ್ತಿರುವುದ ಕೇವಲ ಭಂಡವಲ ಗಾರರ ವಿರುದ್ಧವಲ್ಲ. ಹೊಸ ಹೊಸ ಯಾಂತ್ರಿಕಶೋಧನಗಳನ್ನೂ, ರಾಷ್ಟ್ರೀಯ ಭಾವನೆಯನ್ನೂ ತಮ್ಮ ಕಾರ್ಯ ಸಾಧನೆಗೆ ಉಪಯೋಗಿಸಿಕೊಳ್ಳುತ್ತಿರುವ ಜನಾಂಗಗಳ ವಿರುದ್ಧ ಈಗಿನ ಹೋರಾಟ ನಡೆದಿದೆ. ಭಂಡವಲ ಶಾಹಿಯನ್ನು ಜಗತ್ತಿನಲ್ಲೆಲ್ಲಾ ಹರಡಿ ದೇಶ ದೇಶಗಳಲ್ಲಿಯ ಪೇಟೆಗಳನ್ನು ಆಕ್ರಮಿಸಿಕೊಂಡು ಲಾಭ ಪಡೆಯಬೇಕೆಂಬವರ ವಿರುದ್ಧ ಈ ಯುದ್ಧವು ನಡೆಯಬೇಕಾಗಿದೆ. 'ಫೆಸೀಜಂ' ಎಂದರೆ ಭಂಡವಲ ಶಾಹಿಯ ಅತಿರೇಖವಾಗಿದೆ.

'ಸಮಾಜವಾದ' ಮತ್ತು 'ಫೇಸಿಜಂ' ಇವೆರಡೂ ಒಂದೇ ತಾಯಿಯ ಅವಳಿ ಮಕ್ಕಳೆಂದು ಹಲವರು ಹೇಳುತ್ತಾರೆ ಇದನ್ನು ಲಾಸ್ಕಿಯವರು ಒಪ್ಪುವುದಿಲ್ಲ. ಯಾಕೆಂದರೆ ನಿಜವಾದ 'ಸಮಾಜವಾದ' ವು ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯಗಳ ಶೋಧಕವಾಗಿದೆ. ಯುದ್ಧಕ್ಕಿಂತಮುಂಚೆಯೇ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಪ್ರಜಾಪ್ರಭುತ್ವದ ಪ್ರಗತಿಯಾಗಬೇಕಿತ್ತು. ಆದರೆ ಅಧಿಕಾರೀ ವರ್ಗದವರಿಗೆ ತಮ್ಮ ಹಕ್ಕುಬಾಧ್ಯತೆಗಳು ನಷ್ಟವಾಗುವವೆಂಬ ಹೆದರಿಕೆಯಿದ್ದುದರಿಂದ ಅವರು ಹೀಗೆ ಮಾಡಗೊಡಲಿಲ್ಲ. ಈ ತತ್ವದಂತೆ ಆರ್ಥಿಕ ಪುನರ್ರಚನೆಯಯಗದ್ದರೆ ಅಧಿಕಾರ ವರ್ಗದವರು ಹೇಳಿಕೊಳ್ಳುವ ಪ್ರಜಾಪ್ರಭುತ್ವದಲ್ಲಿಯ ಆದರ ವಿಶ್ವಾಸವು ನಿಜವಾದುದೆಂದು ತಿಳಿಯಲಾಗುತ್ತಿತ್ತು. ಆರ್ಥಿಕ ರಚನೆಯು ಇಂಥಾ ಪ್ರಜಾಪ್ರಭುತ್ವದ ತತ್ವಗಳಿಗನುಸಾರವಾಗಿ ಯುದ್ಧ ಮುಗಿಯುವ ಪೂರ್ವದಲ್ಲಿಯೇ ರೂಪುಗೊಳ್ಳದಿದ್ದರೆ ಸಮ್ರಾಜಸ್ವಾಸ್ಥ್ಯವನ್ನು ಶಾಂತಮಾರ್ಗದಿಂದ ಕೈಕೊಳ್ಳುವುದು ಅನಶ್ಯಕವೆಂದು ತಿಳಿಯಬೇಕು. ಹಿಟ್ಲರಿನ ಸತನವಾದ ನಂತರ ಇಂಥಾ ಪುನರ್ರಚನೆಗೆ ಯೋಗ್ಯ ಸಂಧಿಯೊದಗುವುದು. ಆದರೆ ಇಂಥ ಸಂಧಿಯ ಯೋಗ್ಯವಾದ ಉಪಯೋಗವನ್ನು ಮಾಡಲಾಗುವುದೆಂದು ಹೇಳುವುದು ಬಿಗಿಯಾದ್ದು. ಯಾಕೆಂದರೆ ಸಂಯುಕ್ತ ರಾಷ್ಟ್ರಗಳಲ್ಲಿದ್ದ ಹಲಕೆಲವರು ಜರ್ಮದಿ ಇಟಲಿಗಳಲ್ಲಿನ ಪರಿಸ್ಥಿತಿಗೆ ಕಾರಣರಾದಂಥ ಜನರು ಇರುವರು.

ಈಗಿನ ಪರಿಸ್ಥಿತಿಯಲ್ಲಿ ಇಂಗ್ಲೆಂಡಿನಲ್ಲಿಯ ಕೂಲಿಗಾರ ಪಕ್ಷವು ಮುಂದಾಳುತನವನ್ನು ವಹಿಸುವದೆಂದು ಲಾಸ್ಕಿಯವರಿಗೆ ಅನ್ನಿಸುವದಿಲ್ಲ, ಈ ಪಕ್ಷದ 'ಕೂಪಮಂಡೂಕ' ವೃತ್ತಿಯನ್ನೂ, ಮೈತ್ನನ್ನ ಧೋರಣವನ್ನೂ ಲಾಸ್ಕಿಯವರು ಕಟುವಾಗಿ ಟೀಕಿಸುತ್ತಾರೆ. ಸಮಾಜವಾದವು ಈ ಪಕ್ಷದ ನಿಜವಾದ ತಳಹದಿಯಾಗಿರದೆ ತೋರಿಕೆಯದಾಗಿರುತ್ತದೆ. ಇದರಲ್ಲಿ ಆಮೂಲಾಗ್ರವಾದ ಕ್ರಾಂತಿಯಾಗಬೇಕು. (ಹು. ಗೆ.)

ಸ್ಕ್ಯಾಂಡಡ್ ಒಟ್ಟಿಯಾಯಿತು. ಈಗೆ ತಿರುವಾಂಕೂರಿನಲ್ಲಿ ಸ್ಕ್ಯಾಂಡಡ್ ಊಟ ಸಹಾ ಏರ್ಪಾಡಾಗಿದೆ- ಸ್ಕ್ಯಾಂಡಡ್ ಊಟವೆಂದರೆ ಬಗೆಬಗೆಯ ಊಟವಲ್ಲ, ಹೊಟ್ಟೆ ತುಂಬುವ ಕೆಲವು ಬಗೆಯ ಊಟ ಮಾತ್ರ.

ರಷ್ಯಾದವರಿಗೆ (ಸ್ಟಾಲಿನ್) ಹಿಂದೆ ಜಾರ್ ಕ್ರವರ್ತಿಗಳ ಕಾಲದಲ್ಲಿದ್ದಷ್ಟು ದೇಶ ಬೇಕಂತೆ, ಇನ್ನು ಹೆಚ್ಚು ಬೇಡವಂತೆ, ಆಶೆಯಿಲ್ಲವಂತೆ!

ಂ ಂ

ಮಿ|| ರೊಸ್ವೆಲ್ಟ್‌ರವರು ನ್ಯೂಯಾರ್ಕಿನಲ್ಲಿ ಕಾಲವಾದರು. ಹಿಂದೆ ಇವರು ಕೊರ್ಟಿಗೆ ಅವಮಾನ ಮಾಡಿದರೆಂದು ಹಿಟ್ಲರಿಗೆ 1 0 00 ಮಾರ್ಕ್ (ಜರ್ಮನಿ ನಾಣ್ಯ) ಜುಲ್ಮಾನೆ ವಿಧಿಸಿದರು. ಇನ್ನು ಮುಂದೆ ಹಿಟ್ಲರ್ ಇಂಥಾ ವಿಷಯದಲ್ಲಿ ಯಾತಕ್ಕೆ ಬೊಂಬಾಯಿನ ಬಿ. ಬಿ. ಹಾರ್ನಿಮೆರನ್ನು ಸಲಹೆ ತೆಗೆದು ಕೊಳ್ಳಬಾರದೆ !

ಂ ಂ

ಬೊಂಬಾಯಿನವರಿಗೆ ವರ್ಷಕ್ಕೆ ತಿನ್ನುವುದಕ್ಕೆ 11 50 000 ಟ್ಕ ಅಕ್ಕಿ ಬೇಕು, ಬೊಂಬಾಯಿನಲ್ಲಿ ಬೆಳೆಯುವುದು 928000 ಟ್ಕ ಅಂದರೆ 228000 ಟ್ಕ ಇತರ ಪ್ರದೇಶಗಳಿಂದ ಆಮದು ಮಾಡಿಕೊಳ್ಳಬೇಕು. ಹೆಚ್ಚಿಗೆ ಬೆಳೆದರೆ ಖಜರಿ ಬೆಳೆಯಬಹುದು. ಅಕ್ಕಿ ಬೆಳೆಯುವದಕ್ಕಾಗುವುದಿಲ್ಲ. ಆದ್ದರಿಂದ ಬೊಂಬಾಯಿನವರೇ, ಖಜರಿ ಊಟ ಮಾಡಿ ದೇಹಕ್ಕೆ ಒಳ್ಳೆದು ಅಕ್ಕಿ ಕಮ್ಮಿ ತಿನ್ನಿ.

ಅಕ್ಕರ ಸಾಮಾಜಿಕ

ಭಾವಪರಿಪೂರ್ಣವಾದ ಕಥೆ ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು. ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು.

ದೇಶಾಭಿಮಾನ. ಸ್ವಾಭಿಮಾನ

ಇವುಗಳೆರಡರ ದೃಷ್ಟಿಯಿಂದಲೂ ಮೈಸೂರಿನವರಿಗೆ ಜೀವವಿಮೆ ಮಾಡಲು

ಮೈಸೂರು ಸರ್ಕಾರದ ಜೀವವಿಮೆ ಇಲಾಖೆಯ

ಪ್ರಜೆಗಳ ಶಾಖೆಯೇ ಅತ್ಯುತ್ತಮ ಸಂಸ್ಥೆ!

ವಿಮೆಯ ಮೊಬಲಗಿಗೆ ಸರ್ಕಾರದ ಹುಟ್ಟುವಳಿಯೇ ಆಧಾರ

ವಿಮೆಯ ಹಣವನ್ನು ಸ್ವಲ್ಪವೂ ಸಾವಕಾಶವಿಲ್ಲದೆ ಪಾವತಿಮಾಡಲಾಗುವದು

ವಿಮೆದಾರರಿಗೆ ಅಡಳಿತ ಸಮಯದಲ್ಲಿ ಪ್ರಾತಿನಿಧ್ಯವುಂಟು

ಸಾವಿರಕ್ಕೆ ಸಾಲಿಯಾನಾ ಇಪ್ಪತ್ತು ರೂ. ಗಳಂತೆ ಬೋನಸ್ ಹಂಚಿದೆ

ಹೆಚ್ಚು ವಿವರಗಳಿಗೆ ಪತ್ರವಿಟ್ಟು ಬರೆಯಿರಿ—

ಸೆಕ್ರೆಟರಿ,

ಮೈಸೂರು ಸರ್ಕಾರದ ಜೀವವಿಮೆ ಇಲಾಖೆ

ಬೆಂಗಳೂರು.

2nd week

—

Opera Talkies

SHARADA

A Kardar Production

(Hindi)

Featuring

Mehatab
Nirmalakumari
Prarimadevi
Rajakumari
with others

Rates Last Class 0—3—0
The Other Classes As Usual

Daily 3 Shows

Edited, Printed & published by M. S. Krishna Rao, at the Satyavadi Press. Chamaraja Agrahar, Mysore.

ಕಿರಿಯರ

ವಿಶ್ವಭಾರತಿ ಮೈಸೂರು ವೈಶ್ಯಪತ್ರಿಕೆ

ಉತ್ತಮ ಸಚಿತ್ರ ಕನ್ನಡ-ತೆಲಗು

ಮಾಸಪತ್ರಿಕೆಗೆ

ದಸರಾ ಸಂಚಿಕೆ

ಪಕೋಡ

ತ್ಯಾಗಿ

ರೂಪಾಯಿಗೆ 'ರೂಪಾಕ್ಷಿ'?

ಛಾಯಾ ಪ್ರಕಾಶ

Editor's Mail

— ಬೆಲೆ 2 ಆಣೆ —

* ನಿಮ್ಮ ಪ್ರತಿಯನ್ನು ಕಾದಿರಿಸಿ *

ಓ. ವಿ. ಗುಪ್ತ

ಒಳೇಪೇಟೆ ಬೆಂಗಳೂರು

ದಿ ನ್ಯೂಸ್‌ಪೇಪರ್ ಹೌಸ್

ಮೈಸೂರು

ವೆಂಕಟೇಶ ಬುಕ್ ಡಿಪೋ

ಶಿವಮೊಗ್ಗ

ಹೆಚ್. ಆರ್. ಜಿ. ಸಿ. ಯವರ

ಶ್ರೀ ಪಿಕ್ಚರ್ಸ್

ತಯಾರಿಕೆ

ವಾಣಿ OR

[Violinist]

ಎಂಬ ಕನ್ನಡ ಸಾಮಾಜಿಕ ಚಿತ್ರ

ನಿಮ್ಮ ಮನರಂಜನೆಗಾಗಿ ಬೇಗ ಬರಲಿದೆ

Laksbminarasimha Press

Artistic & Colour Printing a speciality

Srirampet, Mysore

ಟರ್ಕಿ ಸುಲ್ತಾನರ ಮೆಚ್ಚಿಗೆ ಪಡೆದು ಈಗ ನಿಮ್ಮಗಳ ಸೇವೆಗಾಗಿ ಇಲ್ಲಿಗೆ ಬಂದಿರುತ್ತಾರೆ.

ಯೂರೋಪು, ಏಷ್ಯಾ ಮತ್ತು ಅಮೇರಿಕಾ ಮೊದಲಾಗಿ ಪ್ರಪಂಚದಲ್ಲೆಲ್ಲಾ ಪ್ರಸಿದ್ಧಿ ಪಡೆದ ಟರ್ಕಿ ಸುಲ್ತಾನರ ಆಸ್ಥಾನ ವೈದ್ಯರು. ಇವರು ಯುನಾನಿ ವೈದ್ಯ ಪದ್ಧತಿಯನ್ನು ಅತ್ಯುನ್ನತ ಸ್ಥಿತಿಗೆ ತಂದಿರುವುದು ಸರ್ವರಿಗೂ ಈಗಾಗಲೇ ವಿದಿತವಾಗಿರುತ್ತೆ. ಇವರು ಎಲ್ಲಾ ವಿಧವಾದ ಎಂಥಾ ಉತ್ಕಟವಾದ ಖಾಯಿಲೆಗಳನ್ನು ಬಹಳ ಚಮತ್ಕಾರದಿಂದ ಗುಣಪಡಿಸುವ ವಿಷಯ ಸಹ ಸರ್ವರಿಗೂ ತಿಳಿದದ್ದಾಗಿರುತ್ತೆ. ಈ ಅದ್ಭುತ ವೈದ್ಯ ವಿಷಯಗಳು ಈವರೆಗೆ ಆರ್ಷೇಯವಾಗಿ ಇವರ ಮನೆತನದವರಿಂದ ಒಂದದ್ದಾಗಿರುತ್ತೆ. ರಾಜರುಗಳು ಮತ್ತು ಅನೇಕ ಸರಕಾರಗಳೂ ಇವರಿಗೆ ಬಿರುದುಗಳನ್ನೂ ಮತ್ತು ಯೋಗ್ಯತಾ ಪತ್ರಗಳನ್ನೂ ಪ್ರಯುಕ್ತಾಲಿಸಿರುತ್ತಾರೆ.

ಆರೋಗ್ಯ, ಐಶ್ವರ್ಯ, ಆಯುಷ್ಯಗಳನ್ನು ಆರ್ಜಿಸಲು ಡಾಕ್ಟರುಗಳು ಹಕೀಮರು, ಪಂಡಿತರುಗಳಲ್ಲಿ ಪ್ರಯತ್ನಿಸಿ ವಿಫಲರಾಗಿ ನಿರಾಶರಾಗಿರುವರು. ಕೆಳಗೆ ಕಂಡ ಸ್ಥಳದಲ್ಲಿ ಹೊಸದಾಗಿ ಸ್ಥಾಪಿತವಾಗಿರುವ ವೈದ್ಯಕಾಲೆಗೆ ಹೋಗಿ ವಿಚಾರಿಸಿ. ಸರ್ವರಿಗೂ ಅಮೂಲ್ಯವಾದ ಅವಕಾಶವಾಗಿರುತ್ತದೆ.

ತ್ವರಿತಪೂರ್ತಿ ನಿಮಗೆ ಸಂಪೂರ್ಣ ತೃಪ್ತಿಯುಂಟಾಗುತ್ತೆ. ಪರೀಕ್ಷಿಸಿದಲ್ಲಿ ನಿಜಾಂಶ ಸ್ಪಷ್ಟವಾಗುವುದು.

ನಪುಂಸಕತ್ವ, ಪೂರ್ಯನೀತ, ಧಿನುಗಿರೋಗ, ಮೂಲವ್ಯಾಧಿ, ಅಮವಾತ, ಪಕ್ಷಾಘಾತ, ಕೈಕಾಲುಹಿಡಿತ ಕೆನ್ನು. ಉಬ್ಬಸ, ನೂತ್ರದೋಷ ಮತ್ತು ವೀರ್ಯ ದೋಷಗಳು, ತೊಟ್ಟೀಸೋವು, ಪಿತ್ತಕೋಶ ಮತ್ತು ರಕ್ತ ದೋಷಗಳ ಖಾಯಿಲೆಗಳು. ಹಳೇ ಖಾಯಿಲೆಗಳನ್ನು ಚಿಕಿತ್ಸೆಮಾಡುವರು.

ವೀರ್ಯಹೀನರಾದವರು ಪುನಃ ಶಕ್ತಿಯನ್ನು ಪಡೆಯಲು ಇದೇ ಸಮಯ

ಚಿಕಿತ್ಸಾ ಕಾಲ:
ಬೆಳಿಗ್ಗೆ ೮ ರಿಂದ ೧೧ ರವರೆಗೆ
ಸಾಯಂಕಾಲ ೫ ರಿಂದ ೮ ರವರೆಗೆ

ನ್ಯೂ ರಾಯಲ್ ಡಿಸ್ಪೆನ್ಸರಿ
೬೪೧-೪೨, ಅಶೋಕ ರೋಡ್,
(ಕ್ಲಾಕ್‌ಟವರ್ ಹತ್ತಿರ) ಮೈಸೂರ

National Emporium

ನ್ಯಾಷನಲ್ ಎಂಪೋರಿಯಂ

(ಮದ್ರಾಸು ಅಂಗಡಿ)

ಸಯ್ಯಾಜಿರಾವ್ ರೋಡ್, ಮೈಸೂರು

	ರೂ. ಆ.		
ಲಾಲ್‌ಮಿಲ್ಸ್ ಚಿಂಟ್ಜ್ ಗಜ 1 ಕ್ಕೆ	0- 9	ಲಾಂಗ್‌ಕ್ಲಾತ್ ಡಬ್ಬಲ್‌ಸೈಕಲ್	0-8½
ವಿಕ್ರಮ ಮಿಲ್ಸ್ "	0-8½	ನಂ. 3640	0-7½
ಡೋರಿಯಾ ವಾಯಿಲ್ "	0-12	ಹಿಂದೂಮಾತ	0-12
ಡಬ್ಲ್ ಕಲರ್ ವಾಯಿಲ್ 45"	1- 0	ವಿವರ್ವ ಮಿಲ್ಸ್	0- 9
ಹುಡಗರಿಗಾಗಿ ಶುದ್ಧ ಉಣ್ಣೆ ಸ್ವೆಟರ್ 1 ಕ್ಕೆ	2- 0	ಬಕಿಂಗ್ಹಂ ಮಿಲ್ಸ್	0- 10
ಕರ್ನಾಟಕ್‌ಮಿಲ್ಸ್ ಮ್ಯಾಟಿ 1 ಗಜಕ್ಕೆ	0-14	ಕರ್ನಾಟಕ ಮಿಲ್ಸ್ 45"	0-15
" 72" ಷೀಟಿಂಗ್ "	2- 0	ನಗ್ರಿ ಮಿಲ್ಸ್	0-10½
ಬಕಿಂಗ್ಹಂ ಮಿಲ್ಸ್ ಟ್ವೆಲ್ "	0-14	ಹಾಫ್ ಆರಂ ಷರ್ಟ್‌ಗಳು 1 ಕ್ಕೆ	1- 9
ಆಕ್ ಬ್ಲೀಚ್ಡ್ ಲಾಂಗ್ ಕ್ಲಾತ್ 45"	0-11	ಪೈಜಾಮಾ "	1-10
" 50"	0 9	ಸ್ಪೋರ್ಟ್ಸ್ ಷರ್ಟಿಂಗ್ 1 ನೇ ದರ್ಜೆ 1 ಗಜಕ್ಕೆ	0-14
ಗೀರಿನ ಖದ್ದರ್ ಚೆಕ್ ಷರ್ಟಿಂಗ್	0- 6	" ಹಾಫ್‌ಆರಂ ಷರ್ಟ್ 1 ಕ್ಕೆ	2- 2
ಹತ್ತಿ ನೂಲಿನ ರಗ್ 1 ಕ್ಕೆ	3- 8	ಸೋಲಾಪುರ ಗೆರೆ ಕೋಟಿಂಗ್	0-11
ಇಟಾಲಿಯನ್ ಲೈನಿಂಗ್ 48" 1 ಗಜಕ್ಕೆ	1- 8	ಸೂರತ್ ಕೋಟಿಂಗ್ 1 ಗಜಕ್ಕೆ	1. 4
ಹೇರ್ ಕಾರ್ಡ್ ಸ್ಪೆಷ್ ಕ್ಲಾತ್	1- 0	ಚೆಕ್ ಕೋಟಿಂಗ್	0-14
ವ್ಯಾಲಿ ಬ್ರದರ್ಸ್ ಡ್ರಿಲ್	0-12	ಕೃಷ್ಣಾ ಮಿಲ್ಸ್ ಕೋಟಿಂಗ್	1 4
ಕೆ. ಆರ್. ಮಿಲ್ಸ್ ಡ್ರಿಲ್	0-10	ಮಿಲ್ ಷರ್ಟಿಂಗ್	0-12
ವಿನರ್ವ ಮಿಲ್ ಡ್ರಿಲ್	1- 0	ಕೆ.ಆರ್.ಮಿಲ್ ಧೋತಿ 2 x 8 ಗಜ	6- 8
		ಫಿನ್ಲೆ ಮಾಡರಿ "	8- 8
		ಮರ್ಸರೈಸ್ಡ್ ಪಂಚೆ	9- 8
		ಲ್ಯಾಂಕಷೈರ್ ಮೇಲ್	9-12

ಇವಲ್ಲದೆ ಸೊಳ್ಳೆ ಫರದೆಗಳು' ಕುದ್ದವಾದ ವುಲ್ಕ್ ರಗ್ಗುಗಳು, ಫ್ಯಾಕ್ ಸ್ಯಾಡ್ಲ್ಸ್, ಬ್ಯಾಂಗಲ್ಸ್, ಆಯಿಲ್ ಕ್ಲಾತ್ ಬೆಂಗಳೂರು ಕಾಶ್ಮೀರ ಬಂಗಾಳಾ ಬರೋಡಗಳ ರೇಷ್ಮೆ ಸೀರೆಗಳು ಸಹ ಬೇಕಾದಷ್ಟು ದಾಸ್ತಾನಿವೆ.

ದಯವಿಟ್ಟು ಪ್ರಿಂಟೆಡ್ ಸೀರೆಗಳ ನಾನಾ ರಚನೆಗಳು ಮತ್ತು ಬಳೆಗಳ ಮಾದರಿಗಳನ್ನು ನೋಡಲು ತಪ್ಪಬೇಡಿ.